# ವಚನ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

**ಕುಸುಮಾಂಜಲಿ ಎಲ್. ಸಿ. ಜಗದೀಶ್**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎನ್.ಐ.ಇ. ಪ್ರಥಮ ದರ್ಜೆ ಕಾಲೇಜು, ವಿಶ್ವೇಶ್ವರ ನಗರ, ಮೈಸೂರು.

DOI: https://doi.org/10.5281/zenodo.15490805

## ABSTRACT:

ಇದರಲ್ಲಿ ವಚನ ಸಾಹಿತ್ಯ ಮತ್ತು ಸ್ತ್ರೀ ಸಂವೇದನೆಯ ಸಂಬಂದವನ್ನು ಹೇಳಲಾಗಿದೆ. ಸ್ತ್ರೀ ಸಂವೇನೆ ಎಂದರರೇನು ಮತ್ತು ಸ್ತ್ರೀವಾದಕ್ಕಿರುವ ಮೌಲ್ಯವು ಯಾವುದು ಹಾಗೂ ಸಂವೇದನೆ ಎಂದರೆ ಏನು ಎಂದು ವಿವರಿಸಲಾಗಿದೆ. ಆದರೆ ಸ್ತ್ರೀವಾದವನ್ನು ಇಲ್ಲಿ ಅನ್ವಯಿಕವಾಗಿ ಮಾತ್ರವೇ ಬಳಸಲಾಗಿದೆ. ಎಲ್ಲಿಯೂ ವಚನ ಕಾರ್ತಿಯರನ್ನು ಮತ್ತು ವಚನಗಳನ್ನು ಹೆಚ್ಚು ಉಲ್ಲೇಖಿಸಲಿಕ್ಕೆ ಹೋಗಲಿಲ್ಲ.

## KEYWORDS:

ಸ್ತ್ರೀವಾದ, ಭಕ್ತಿ ಪಂಥ, ಉಪನಿಷತ್ತು, ಶರಣರು, ಮತ ಧರ್ಮ, ಸಮಾನತೆ.

**ಉದ್ದೇಶ:** ಸ್ತ್ರೀ ವಾದ ಮತ್ತು ಸ್ತ್ರೀಸಂವೇದನೆಯನ್ನು ವಚನ ಸಾಹಿತ್ಯಕ್ಕೆ ಅನ್ವಯ ಮಾಡುವುದು ಇಲ್ಲಿನ ಉದ್ದೇಶವಾಗಿದೆ.

**ಇದುವರೆಗಿನ ಅಧ್ಯಯನ:** ಕೇಶವ ಶರ್ಮ ಕೆ. ಅವರ ಸ್ತ್ರೀವಾದಿ ಚಿಂತನೆಗಳು, ವಿಜಯಾ ದಬ್ಬೆಯವರ ಮಹಿಳೆ ಸಾಹಿತ್ಯ ಮತ್ತು ಸಮಾಜ, ಸ್ತ್ರೀವಾದಿ ಅಧ್ಯಯನ (ಸಬಾಲ್ಟ್ರನ್ ದೃಷ್ಟಿಕೋನ – ಸಬಿತಾ ಬನ್ನಾಡಿ (ಸಂ) ವಚನ ಸಾಹಿತ್ಯದ ಅನುಭಾವದ ನೆಲೆಯನ್ನು ಕುರಿತು ಬಸವರಾಜ ಕಲ್ಗುಡಿ ಯವರು ವಿವರವಾಗಿ ಬರೆದಿದ್ದಾರೆ.

ಮೊದಲು ಸಂವೇದನೆ ಎಂದರೇನು ಮತ್ತು ಅದರ ಪರಿಣಾಮವು ಯಾವ ಬಗೆಯಲ್ಲಿ ಇರುತ್ತದೆ ಎಂದು ನೋಡಬೇಕು. ಇದರ ಕರಿತು ಕೇಶವ ಶರ್ಮ ಕೆ. ಅವರು ಗ್ರಾಂಶಿಯ ಪರಿಭಾಷೆಯಲ್ಲಿ ಹೀಗೆ ವಿವರಿಸಿದ್ದಾರೆ

ಗುಪ್ತರ ಕಾಲದ ನಂತರ ಮತಧರ್ಮೀಯ ಕಲ್ಪನೆಗಳಲ್ಲಿಯೂ ಸಹ ಕೆಲವು ಬದಲಾವಣೆಗಳನ್ನು ಕಾಣಬಹುದು. ಹಿಂದೂ ದೇವತೆಗಳು ಹಂತಹಂತಗಳಲ್ಲಿ ಒಂದು ಶ್ರೇಣಿಯಲ್ಲಿ ವ್ಯವಸ್ಥೆಗೊಂಡವು. ಸಮಾಜವು ಸಂಸ್ಕಾರ, ಭೂಮಿಯ ಒಡೆತನ, ಸೇನಾಬಲ ಮುಂತಾದ ಪರಿಗಣನೆಗಳಿಂದ ಮೇಲು–ಕೀಳು ಹಂತಗಳಲ್ಲಿ ವ್ಯವಸ್ಥೆಗೊಂಡಿದ್ದಂತೆ ದೇವತೆಗಳೂ ಮೇಲು–ಕೀಳುಗಳಾಗಿ ವ್ಯವಸ್ಥೆಗೊಂಡವು. ವಿಷ್ಣು,

ಶಿವ ಮತ್ತು ದುರ್ಗಾ ಅತ್ಯುನ್ನತ ದೈವಗಳೆಂದು ಪರಿಗಣಿತರಾಗಿ, ಪರಿವಾರವಾಗಿ ಹಾಗೂ ಪರಿಚಾರಕರಾಗಿ ಕೆಳಸ್ಥಾನಗಳಲ್ಲಿ ನಿಯಮಿತಗೊಂಡ ಇತರ ಹಲವಾರು ದೇವದೇವತೆಗಳನ್ನು ಮೇಲಿನ ಅತ್ಯುಚ್ಚ ಸ್ಥಾನಗಳಲ್ಲಿ ಇರಿಸಲ್ಪಟ್ಟರು. ಬ್ರಹ್ಮ, ಗಣಪತಿ, ವಿಷ್ಣು, ಶಕ್ತಿ ಮತ್ತು ಶಿವ ಇವರನ್ನು 'ಪಂಚದೇವ' ಎಂದು ಕರೆದು ಪೂಜಿಸುವುದು ರೂಢಿಗೆ ಬಂತು. ಶಿವ ಅಥವಾ ಮತ್ತೆ ಯಾವುದಾದರೂ ದೇವರನ್ನು ಮುಖ್ಯ ಮಂದಿರದಲ್ಲಿ ಪ್ರತಿಷ್ಠಾಪನೆ ಮಾಡಿ, ಇತರ ನಾಲ್ಕು ದೇವರುಗಳನ್ನು ಸಣ್ಣ ಗುಡಿಗಳಲ್ಲಿ ಅದರ ಸುತ್ತ ಸ್ಥಾಪಿಸುತ್ತಿದ್ದರು. ಅಂತಹ ದೇವಾಲಯಗಳಿಗೆ 'ಪಂಚಾಯತನ' ಎಂದು ಹೆಸರು. ವೇದಕಾಲದ ಇಂದ್ರ, ವರುಣ, ಯಮ ಮುಂತಾದ ದೇವತೆಗಳು ಲೋಕಪಾಲರು ಅಥವಾ ದಿಕ್ಪಾಲಕರಾಗಿ ಕಾವಲು ಭಟರ ಸ್ಥಾನಕ್ಕೆ ಇಳಿಸಲ್ಪಟ್ಟರು. ಮಧ್ಯಕಾಲೀನ ದೇವತಾ ಸಮೂಹಗಳೂ ಸಾಮಾಜಿಕ ಶ್ರೇಣಿಗಳ ಮಾದರಿಯಲ್ಲಿಯೇ ರೂಪಿತವಾದ ದೈವಿಕ ಶ್ರೇಣಿ ವ್ಯವಸ್ಥೆಯ ಕಲ್ಪನೆಯ ಸ್ಪಷ್ಟ ಚಿತ್ರಣ ನೀಡುತ್ತವೆ. ಅಂತಹ ಹಲವು ದೇವತಾ ಸಮೂಹಗಳಲ್ಲಿ ಅತ್ಯುಚ್ಚ ಮಾತೃದೈವವು ಅಥವಾ ದೇವಿಯು ಇತರ ದೇವರುಗಳ ಹೋಲಿಕೆಯಲ್ಲಿ ಅತ್ಯುನ್ನತ ಸ್ಥಾನ ಪಡೆದಿರುವುದುಂಟು.

ಭಕ್ತಿ ಮತ್ತು ಅಹಿಂಸೆಗಳು ಭಾಗವತ ಮತಧರ್ಮದ ಪ್ರಮುಖ ಲಕ್ಷಣಗಳು. ಭಕ್ತಿ ಎಂದರೆ ಪ್ರೀತಿಪೂರ್ಣ ನಿಷ್ಠೆ. ಅದು ನಾಯಕನಿಗೆ ಬಣದ ಜನ ಅಥವಾ ಪ್ರಜೆಗಳು ರಾಜನಿಗೆ ತೋರುತ್ತಿದ್ದ ನಿಷ್ಠೆಯ ಬಗೆಯದು. ಅಹಿಂಸೆ ಅಥವಾ ಪ್ರಾಣಿಗಳನ್ನು ಕೊಲ್ಲದಿರುವ ತತ್ವವು ಕೃಷಿಕ ಸಮಾಜಕ್ಕೆ ಹೊಂದುವಂತಹುದು. ಅದು ಹಿಂದೆ ವಿಷ್ಣುವಿನೊಂದಿಗೆ ಕೂಡಿದು ಜೀವತತ್ವವಾದ ಫಲಪ್ರದತೆಗೆ ಅನುಗುಣವಾದುದು. ಜನರು ವಿಷ್ಣುವನ್ನು ಪೂಜಿಸಿ, ಅಕ್ಕಿ ಎಳ್ಳು ಮುಂತಾದುವನ್ನು ಅರ್ಪಿಸುತ್ತಿದ್ದರು. ಪ್ರಾಣಿ ಹತ್ತೆಯತ್ತ ಅವರಿಗಿದೆದ ಅಸಹ್ಯದಿಂದಾಗಿ ಅವರು ಶಾಕಾಹಾರವನ್ನು ಮಾತ್ರ ಸೇವಿಸತೊಡಗಿದರು.

ಭಕ್ತಿಯು ಆರಾಧನೆಯ ಒಂದು ಪರಿಕರವೂ ಹೌದು. ಭಕ್ತಿಯು ನಿಷ್ಠೆಯ ಪ್ರತೀಕವೂ ಹೌದು ಎಂಬುದನ್ನು ಮರೆಯಬಾರದು. ಭಕ್ತಿಯ ಕಲ್ಪನೆಯು ಕೇವಲ ಶ್ವೇತಾಶ್ವತರ ಉಪನಿಷತ್ತಿನಲ್ಲಷ್ಟೇ ಅದೂ ಬೀಜ ರೂಪದಲ್ಲಷ್ಟೇ ಕಂಡುಬರುತ್ತದೆ. ಆದಾಗ್ಯೂ ಉಪನಿಷತ್ತುಗಳಿಗೆ ಗೀತೆಯಲ್ಲಿ ಸಾಕಷ್ಟು ಪ್ರಾತಿನಿಧ್ಯ ಸಿಕ್ಕಿದೆ. ಇಷ್ಟಾಗಿಯೂ ನಂತರದ ಕಾಲದ ಅವಶ್ಯಗಳಿಗೆ ಹೊಂದಿಕೊಳ್ಳುವಂಥ ಆವಿಷ್ಕಾರವೊಂದು ಗೀತೆಯಲ್ಲಿತ್ತು. ಅದೇ ಭಕ್ತಿ ಅಂದರೆ, ವೈಯಕ್ತಿಕ ನಿಷ್ಠೆ. ಗೀತೆಯ ಕರ್ತೃ ಯಾರೇ ಆಗಿರಲಿ ಭಕ್ತಿ ಅವರಿಗೆ ಒಂದು ಸಮರ್ಥನೆಯಾಗಿತ್ತು ಮತ್ತು ಎಲ್ಲಾ ದೃಷ್ಟಿಕೋನಗಳನ್ನು ಒಂದು ದೈವಿಕ ಮೂಲದಿಂದ ಪಡೆಯಬಹುದಾಗಿದ್ದ ಏಕೈಕ ಮಾರ್ಗವಾಗಿತ್ತು. ನಂತರದಲ್ಲೂ ತೀರಾ ಕಳಪೆ ಕೃತಿಯಾದ ಅನುಗೀತೆಗೆ ಕೂಡ ಬೇಡಿಕೆ ಇತ್ತು ಎಂದರೆ, ಗೀತೆಯ ಕಾಲದಲ್ಲೇ ಗೀತೆಯ ಉದ್ದೇಶ ಪೂರ್ವಕವಾಗಿ ಈಡೇರಿರಲಿಲ್ಲ

ಎಂದೆನಿಸುತ್ತದೆ. ಬೃಹತ್ ಕೇಂದ್ರೀಕೃತ ಏಕಚಕ್ರಾಧಿಪತ್ಯಗಳಲ್ಲಿ ಕೊನೆಯದು ಹರ್ಷನದು. ಅದು ಅಂತ್ಯಗೊಂಡ ಮೇಲೆ ಮುಂಬರುವ ಹೊಸ ಪ್ರಭುತ್ವವು ಆಮೂಲಾಗ್ರವಾಗಿ ಊಳಿಗಮಾನ್ಯ ಪ್ರಭುತ್ವವೇ ಆಗಿರಬೇಕಿತ್ತು. ಗೇಣಿಯವನು ಒಡೆಯನಿಗೆ, ಅನುಚರನು ಪ್ರಮುಖನಿಗೆ, ಸಾಮಂತರು ರಾಜನಿಗೆ ಸಂಪೂರ್ಣವಾಗಿ ನಿಷ್ಠರಾಗಿಬೇಕು ಎನ್ನುವುದು ಪೂರ್ಣವಾಗಿ ಅಭಿವೃದ್ಧಿಗೊಂಡಿರುವ ಊಳಿಗಮಾನ್ಯ ವ್ಯವಸ್ಥೆಯ ಲಕ್ಷಣ. ಇದೊಂದು ಅಮೂರ್ತವಾದಂತಹ ಸ್ವಾಮಿ ನಿಷ್ಠೆ ಅಲ್ಲ. ಬದಲಾಗಿ ಇದು ಉತ್ಪಾದನಾ ಸಾಧನಗಳು ಮತ್ತು ಸಂಬಂಧಗಳ ಭದ್ರ ಬುನಾದಿಯ ಮೇಲೆ ರೂಪುಗೊಂಡ ಸ್ವಾಮಿನಿಷ್ಠೆ. ಇಲ್ಲಿ ಉತ್ಪಾದನಾ ಸಾಧನಗಳು ಮತ್ತು ಸಂಬಂಧಗಳೆಂದರೆ ಭೂಮಿಯ ಒಡೆತನ, ಮಿಲಿಟರಿ ಸೇವೆ, ತೆರಿಗೆ ಸಂಗ್ರಹಣೆ ಮತ್ತು ದೊಡ್ಡ ಉದ್ದಿಮೆದಾರರ ಮೂಲಕ ಸ್ಥಳೀಯ ಉತ್ಪನ್ನವನ್ನು ಸರಕಾಗಿ ಪರಿವರ್ತಿಸುವ ಪ್ರಕ್ರಿಯೆ. ಕ್ರಿ. ಶ. 6ನೇ ಶತಮಾನಕ್ಕೆ ಮುಂಚಿತವಾಗಿ ಈ ವ್ಯವಸ್ಥೆ ಖಂಡಿತಾ ಸಾಧ್ಯವಿರಲಿಲ್ಲ. 'ಸಾಮಂತ' ಎಂಬುದು ಇಲ್ಲಿ ತೀರಾ ಮುಖ್ಯವಾಗುವ ಪದ. ಕ್ರಿ. ಶ. 532ರ ವೇಳೆಗೆ ಆ ಪದಕ್ಕೆ ಕಡೇ ಪಕ್ಷ 'ನೆರೆಯ ಅರಸ' ಎಂಬ ಅರ್ಥವಾದರೂ ಇತ್ತು. ಆದರೆ ಕ್ರಿ. ಶ. 532ರ ನಂತರ ಜಮೀನುದಾರಿ, ಜಹಗೀರುದಾರ ಎಂಬ ಅರ್ಥ ಪಡೆದುಕೊಂಡಿತು. ಹೊಸ ಜಹಗೀರುದಾರರು ದೊರೆಗೆ ನಿಷ್ಠರಾಗಿದ್ದರು. ತೆರಿಗೆ ಸಂಗ್ರಹಿಸಿಕೊಡುವ ಕಾರ್ಯವನ್ನೂ ನಿರ್ವಹಿಸಿ ಕೊಡುತ್ತಿದ್ದರು. ಮನುಸ್ಮೃತಿಯಲ್ಲಿನ ದೊರೆಗೆ ಸಾಮಂತರಾರೂ ಇರಲಿಲ್ಲ. ಇಡೀ ಆಡಳಿತವನ್ನು ಅವನೇ ನೇರವಾಗಿ, ಅಥವಾ ಯಾವುದೇ ಸ್ವತಂತ್ರ ಸ್ಥಾನಮಾನವಿರದ ರಾಜ – ನಿಯೋಗಿಗಳ ಮೂಲಕ ನಿರ್ವಹಿಸಬೇಕಾಗಿತ್ತು. ಊಳಿಗಮಾನ್ಯ ವ್ಯವಸ್ಥೆಯು 'ಬುಡ'ದಿಂದ ಮತ್ತಷ್ಟು ಬೆಳೆದಂತೆ ಭೂಮಿಯ ಮೇಲೆ ವಿಶೇಷ ಅಧಿಕಾರವಿಲ್ಲದಿದ್ದ (ಸಾಗುವಳಿಯ ಅಥವಾ ವಂಶಪಾರಂಪರ್ಯವಾದ ಒಡೆತನಕ್ಕೆ ಸಂಬಂಧಿಸಿದಂತೆ) ಜನರ ವರ್ಗವೊಂದು ಬೆಳೆಯಿತು. ಅವರು ತೆರಿಗೆಯನ್ನು ಸಂಗ್ರಹಿಸುತ್ತಿದ್ದರು ಹಾಗೂ ವಿಶೇಷ ಸಶಸ್ತ್ರಭಮಟನ ಕೆಲಸವನ್ನೂ ನಿರ್ವಹಿಸುತ್ತಿದ್ದರು. ಇಂತಹ ಸಮಾಜ ಹಾಗೂ ಅದರ ಪ್ರಭುತ್ವವನ್ನು ಒಟ್ಟಿಗೆ ಹಿಡಿದಿಡುವುದಕ್ಕೆ, ಸಹಕಾರಿಯಾದ ಅತ್ಯುತ್ತಮ ಧರ್ಮವೆಂದರೆ, ಭಕ್ತಿಗೆ ತುಂಬಾ ಪ್ರಾಶಸ್ತ್ಯ ನೀಡುವಂತಹ ಧರ್ಮ. ಭಕ್ತಿಗೆ ಪಾತ್ರನಾಗುವ ವ್ಯಕ್ತಿಯಲ್ಲಿ ಎಂತಹುದೇ ನ್ಯೂನತೆಗಳಿದ್ದರೂ ಕೂಡ ಅವನಲ್ಲಿ ಭಕ್ತಿಯಿಡುವುದು ಸಾಧ್ಯವಾಗಬೇಕು.

ಭಕ್ತಿಯ ಕಲ್ಪನೆಯು, ಫ್ಯೂಡಲ್ ಸಿದ್ಧಾಂತಕ್ಕೆ ಅನಿವಾರ್ಯವಾಗಿದ್ದರೂ ಕೂಡ, ಅದರ ಫಲವನ್ನು ಮಾತ್ರ ಎಲ್ಲರೂ ಸಮಾನವಾಗಿ ಅನುಭವಿಸುತ್ತಿರಲಿಲ್ಲ. ರಾಜರ ಭೋಗದ ಅರಮನೆಗಷ್ಟೇ ಅಲ್ಲದೇ, ಅದರ ಮತ್ತೊಂದು ಮುಖವಾದ, ಅಷ್ಟೇ ಶ್ರೀಮಂತವಾದ ಮತ್ತು ಆಡಂಬರಮಯವಾಗಿದ್ದ ದೇವಾಲಯಗಳಿಗೂ ಹಣ ಕೊಡುತ್ತಿದ್ದ ರೈತರಿಗೆ ಊಳಿಗಮಾನ್ಯ ವ್ಯವಸ್ಥೆಯ ಈ ತೆರಿಗೆಯು ತುಂಬಾ

ಹೊರೆಯಾಯಿತು. ಆ ಕಾಲದಲ್ಲಿ ಬ್ರಾಹ್ಮಣ್ಯವು ತುಂಬಾ ಪ್ರಾಧಾನ್ಯಕ್ಕೆ ಬಂದಿತು.

(ಆರ್.ಎಸ್. ಶ್ರಮ 2007 ಪ್ರಾಚೀನ ಭಾರತ ಪುಟ. 213, 263–264 ನವ ಕರ್ನಾಟಕ ಪ್ರಕಾಶನ ಬೆಂಗಳೂರು) ಆದರೆ ಅದ್ವೈತ ಮತ್ತು ವಿಶಿಷ್ಟಾದ್ವೈತದಲ್ಲಿ ಇರುವ ವ್ಯತ್ಯಾಸವು ಕೂಡಾ ಅಷ್ಟೇ ಖಚಿತವಾಗಿದೆ. ಅದನ್ನು ಇಲ್ಲಿ ಕಾಣಬಹುದು.

ಆಳುವುದು ಮತ್ತು ಆಳಿಸಿಕೊಳ್ಳುವುದು ಎಂದರೆ ಅದರಲ್ಲಿ ಪರಿವರ್ತನೆಯು ಇರುತ್ತದೆ. ಹಾಗೆಯೇ ಅದರಲ್ಲಿ ನಿರಾಕರಣೆಯು ಇರುತ್ತದೆ, ಅದರಲ್ಲಿ ಒಂದು ಬಗೆಯ ಒಪ್ಪಂದವೂ ಇರುತ್ತದೆ. ಯಜಮಾನಿಕೆ ಎನ್ನುವುದು ಸಂಸ್ಕೃತಿಯಲ್ಲಿ ಇರುತ್ತದೆ. ಸಂವೇದನೆಯಲ್ಲಿ ಇದರ ಪ್ರಭಾವವು ಇರುತ್ತದೆ. ಅದರಲ್ಲಿ ಸಂಘರ್ಷಗಳು ಇರುತ್ತವೆ. (ಕೇಶವ ಶರ್ಮ ಕೆ. ಗ್ರಾಂಶಿಯ ಪರಿಭಾಷೆಗಳು ರಚನಾ ಪ್ರಕಾಶನ ಮೈಸೂರು)

ಇಲ್ಲಿ ಭಕ್ತಿ ಮತ್ತು ಶ್ರಮಗಳ ಅಂತರ್ ಸಂಬಂಧವನ್ನು ಕುರಿತು ಹೇಳಬೇಕು. ಇದು ಬಹಳ ಹಿಂದಿನಿಂದಲೂ ಬಂದ ಚರ್ಚೆಯು ಆಗಿದೆ. ಭಕ್ತಿಯು ದೇವರ ಮೇಲೆ ಇಟ್ಟಿರುವ ನಂಬಿಕೆಯನ್ನು ಸೂಚಿಸುತ್ತದೆ. ಹಿಂದೂ ಧರ್ಮದ ಪ್ರಕಾರ ದೇವರಲ್ಲಿ ಭಕ್ತಿಯಿಟ್ಟಾಗ ಮಾತ್ರ ಮೋಕ್ಷ ದೊರೆಯುತ್ತದೆ.

**ಭಕ್ತಿಯಲ್ಲಿಯೂ ಬೇರೆ ಬೇರೆ ರೀತಿಯ ರೂಪಗಳಿವೆ:**

1. ಪತಿಯ ಮೇಲಿನ ಭಕ್ತಿ: ಹೆಂಡತಿಯು ಗಂಡನನ್ನು ಆರಾಧಿಸುವುದನ್ನು ಇದು ಸೂಚಿಸುತ್ತದೆ.
2. ಯಜಮಾನನ ಮೇಲೆ ದಾಸನು ತೋರುವ ಭಕ್ತಿ.
3. ಗುರು ಹಿರಿಯರಲ್ಲಿ ಕಿರಿಯರು ತೋರಿಸುವ ಭಕ್ತಿ.
4. ಮೇಲಿನ ಅಧಿಕಾರಿಗೆ ಕೆಳಗಿನ ಅಧಿಕಾರಿಯು ತೋರಿಸುವ ಭಕ್ತಿ ಇಲ್ಲಿ ಎಲ್ಲವೂ ಬೇರೆ ಬೇರೆ ರೂಪಗಳನ್ನು ಹೊಂದಿದೆ.

ಈ ಸಂಬಂಧಗಳಲ್ಲಿ ಇರುವುದು ಮುಖ್ಯವಾಗಿ ಅಸಮತೆ, ಗಂಡನಿಗೆ ಹೆಂಡತಿಯು ತೋರಿಸುವ ಭಕ್ತಿಗೆ 'ಪತಿ ಭಕ್ತಿ'ಯೆಂದು ಹೆಸರು ಪತಿಭಕ್ತಿಯಲ್ಲಿ ದೇಹ, ಮತ್ತು ಮನಸ್ಸು ಎರಡೂ ಕೆಲಸ ಮಾಡುತ್ತದೆ. ಗಂಡನು ಹೆಂಡತಿಯನ್ನು ರಕ್ಷಿಸುತ್ತಾನೆ ಎಂಬ ಕಾರಣದಿಂದ ಪತಿಭಕ್ತಿಯು ಉಂಟಾಗುತ್ತದೆ. ಗುರು – ಶಿಷ್ಯ ಸಂಬಂಧಗಳಲ್ಲಿ ಭಕ್ತಿಯು ಆರಾಧನೆಗೆ ಸಂಬಂಧಿಸಿದೆ. ಇದು ದೇಹ ಸಂಬಂಧಿತವಲ್ಲ, 'ಗುರುಋಣ' 'ಪಿತೃಋಣ' ಮುಂತಾದ ಋಣಗಳ ಪ್ರಶ್ನೆಯು ಈ ಕಾರಣಗಳಿಂದ ಹುಟ್ಟಿಕೊಂಡಿವೆ ಯಜಮಾನ ಮತ್ತು ದಾಸರ ನಡುವೆ ಇರುವುದು ಆಳುವ – ಮತ್ತು ಅಳಿಸಿಕೊಳ್ಳುವ

ಸಂಸ್ಕೃತಿಯನ್ನು ಸೂಚಿಸುತ್ತದೆ. ಆದುದರಿಂದ "ಭಕ್ತಿ"ಯು ಬೇರೆ ಬೇರೆ ಮಾದರಿಗಳನ್ನು ಹೊಂದಿವೆ. ಯಾವಾಗ ಭಕ್ತಿಯೆಂಬ ಪರಿಕಲ್ಪನೆಗಳು ಹುಟ್ಟಿಕೊಂಡಿದೆಯೋ ಅದರಲ್ಲಿ ಸಮಾನತೆಯ ಭಾವಗಳಿಲ್ಲ ಮತ್ತು ಭಕ್ತಿಯು ಒಂದು ಮಾರ್ಗ ಮಾತ್ರ, ಸ್ವಾಮಿ ವಿವೇಕಾನಂದರು 'ಭಕ್ತಿಯೋಗ' ಎಂದು ಕರೆದಿದ್ದಾರೆ. ಭಕ್ತಿಗೆ ಆರಾಧನೆಯು ಒಂದು ಗುಣ ಮಾತ್ರ, ಕೆಲವು ಸಂದರ್ಭಗಳಲ್ಲಿ ಭಕ್ತಿಯು ಆಚರಣೆಯ ಮೂಲಕ ವ್ಯಕ್ತವಾಗುತ್ತದೆ. ಅಕ್ಕ ಎಲ್ಲವನ್ನು ಚೆನ್ನ ಮಲ್ಲಿಕಾರ್ಜುನನಿಗೆ ಅರ್ಪಿಸುತ್ತಾಳೆ.

ಮಧ್ಯಕಾಲೀನ ಯುಗವು ಒಂದು ಸ್ಥಿತ್ಯಂತರವನ್ನು ಹೇಳುತ್ತದೆ. ಅದರಲ್ಲಿ ಅನೇಕ ಚರ್ಚೆಗಳು ಆಗಿವೆ. ಸಂಸ್ಕೃತೀಕರಣಕ್ಕೆ ಗುರಿಯಾದ ಪ್ರಕ್ರಿಯೆಯನ್ನು ರಾಜಾರಾಮ ಹೆಗಡೆಯವರು ಮೇಲೆ ವಿವರಿಸಿದ್ದಾರೆ.

ಅದೇಂದರೆ ದೇವಾಲಯ ಮತ್ತು ಶರಣರ ಸಂಪ್ರದಾಯಗಳು. ಇದು ಸ್ಥಾವರ–ಜಂಗಮ ಎಂಬ ದ್ವಂದ್ವವನ್ನು ಸೂಚಿಸುತ್ತದೆ. ಶ್ರಮಣ ಸಂಪ್ರದಾಯದಲ್ಲಿ ನಿರೀಶ್ವರವಾದಿಗಳೂ ಇದ್ದರೆ ಜಂಗಮ ಸಂಪ್ರದಾಯವು ಭಕ್ತಿಯ ಪರಾಕಾಷ್ಠೆಯಲ್ಲಿ ಹುಟ್ಟಿದ್ದಾಗಿದೆ. ಈ ಕಾರಣದಿಂದ ಆಯಾ ಪರಂದೈವಕ್ಕೆ ಸಂಬಂಧಿಸಿದ ಸ್ಥಾವರ ಸಂಪ್ರದಾಯದಲ್ಲೇ ಇವರನ್ನೂ ಸೇರಿಸುವ ರೂಢಿ ಬೆಳೆದಿದೆ. ಉದಾಹರಣೆಗೆ ಶೈವರು, ವೈಷ್ಣವರು, ಇತ್ಯಾದಿಯಾಗಿ. ಆದರೆ ಸಾಮಾಜಿಕ ಇತಿಹಾಸದ ದೃಷ್ಟಿಕೋನದಿಂದ ಈ ಸಂಪ್ರದಾಯಗಳಲ್ಲಿನ ಸ್ಥಾವರ–ಜಂಗಮಗಳ ನಡುವಿನ ವಿರುದ್ಧ ನಿರ್ಮಾಣಗಳನ್ನು ಗ್ರಹಿಸುವುದು. (ರಾಜಾರಾಮ ಹೆಗಡೆ 2001 ಗತಕಥನ ಪುಟ. 17–18 ರಾಘವೇಂದ್ರ ಪ್ರಕಾಶನ ಮಲ್ಲಾಡಿಹಳ್ಳಿ )ಸಾಮಾಜಿಕ ಸಂರಚನೆಗಳು, ಪ್ರಭುತ್ವ, ನಾವು ಬದುಕುವ ರೀತಿಗಳೆಲ್ಲಾ ನಮ್ಮ ಜೀವನವನ್ನು ವ್ಯಾಖ್ಯಾನಿಸುತ್ತವೆ. ಸ್ಥಾವರ ಎನ್ನುವುದು ಒಂದು ಸ್ಥಿರವಾದ ವ್ಯವಸ್ಥೆ. ಆದರೆ ಜಂಗಮ ಎನ್ನುವುದು ಚಲನಶೀಲವಾದ್ದು. ಆದ್ದರಿಂದ ನಾವು ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಅನೇಕ ಬದಲಾವಣೆಯನ್ನು ಕಾಣುತ್ತೇವೆ. ಅದನ್ನೇ ನಾವು ಈವತ್ತು ಶರಣರ ಚಳುವಳಿ ಎಂದು ಹೇಳುತ್ತೇವೆ:

**ಅದರ ಸ್ವರೂಪವನ್ನು ನಾವು ಹೀಗೆ ಗುರುತಿಸಬಹುದು:**

1. ಭಕ್ತಿಯು ಒಂದು ಚಳುವಳಿಯ ರೂಪವನ್ನು ಪಡೆಯಿತು
2. ಎಲ್ಲರೂ ದೇವರನ್ನು ಕಾಣಬಹುದು ಎನ್ನುವುದು ಇದರ ತತ್ವಜ್ಞಾನವಾಗಿದೆ.
3. ನಾವು ಮಾಡುವ ಕೆಲಸದಲ್ಲಿ ದೇವರನ್ನು ಕಾಣಲು ಸಾಧ್ಯ ಇದನ್ನು ಕನ್ನಡದಲ್ಲಿ ಕಾಯಕ ಎಂದು ಹೇಳುತ್ತೇವೆ.
4. ಕಾಯಕ ಎಂದರೆ ಅದು ಶ್ರಮ.
5. ಶ್ರಮವು ಎರಡು ಬಗೆ: ಒಂದು ಕಾಮ್ಯ. ಮತ್ತೊಂದು ಅಕಾಮ್ಯ. ಕಾಮ್ಯ ಶ್ರಮವು ತಾನು ಮಾಡುವ ಕೆಲಸಕ್ಕೆ ಪ್ರತಿಫಲವನ್ನು ಬೇಡುತ್ತದೆ. ಅಕಾಮ್ಯವು ಯಾವುದೇ ಪ್ರತಿಫಲವನ್ನು ನಿರೀಕ್ಷೆ

ಮಾಡುವುದಿಲ್ಲ. ವಚನ ಕಾರರರು ಅಕಾಮ್ಯವನ್ನು ಒಪ್ಪಿದವರು.

6. ಇದರಲ್ಲಿ ನಾವು ದೇವರ ಬಳಿಗೆ ಹೋಗಬೇಕಾಗಿಲ್ಲ. ದೇವರು ನಮ್ಮ ಕೆಲಸದಲ್ಲಿಯೇ ಇದ್ದಾನೆ.
7. ಅದು ನೇರವಾದ ಅನುಭವಕ್ಕೆ ಸಿಗದೆ ಹೋಗಬಹುದು. ಆದರೆ ಅದರಲ್ಲಿ ಭಕ್ತಿಯು ಇಲ್ಲ ಎಂದು ಹೇಳುವಂತೆ ಇಲ್ಲ.
8. ಭಕ್ತಿ ಎನ್ನುವುದು ಒಂದು ಯೋಗ.
9. ರಾಮಾನುಜರ ದೃಷ್ಟಿಯಲ್ಲಿ ಭಕ್ತಿಯೂ ಒಂದು ಬಿಡುಗಡೆ ಅದು ಉಪಾಸನೆಯಲ್ಲಿ ಸಾದ್ಯವಾಗುತ್ತದೆ.
10. ಭಕ್ತಿಯು ದೇವರನ್ನು ಕಾಣುವ ಮಾರ್ಗವೂ ಹೌದು. , ರಾಮಾನುಜರು ಶ್ರಮ ಯೋಗವು ಜ್ಞಾನದ ಒಂದು ಮಾರ್ಗ ಎಂದು ಹೇಳುತ್ತಾರೆ. ಜ್ಞಾನ ಮಾರ್ಗದ ಒಂದು ಮೆಟ್ಟಿಲು ಶ್ರಮಮಾರ್ಗವಾಗಿದೆ. ಅವರಲ್ಲಿ ಶ್ರಮ, ಜ್ಞಾನ ಮತ್ತು ಭಕ್ತಿಯು ಜೊತೆಗೆ ಹೋಗುತ್ತದೆ.
11. ಮಧ್ವಚಾರ್ಯರು ಆತ್ಮದ ಅರಿವು ಮತ್ತು ಪರಮಾತ್ಮದ ಅರಿವು ಇದ್ದರೆ ಮಾತ್ರವೇ ನಾವು ಮೋಕ್ಷವನ್ನು ಪಡೆಯಲು ಸಾಧ್ಯ. ಆದ್ದರಿಂದ ಭಕ್ತಿ ಎನ್ನುವುದು ಒಂದು ಹಾದಿ ಮಾತ್ರ. ( ಪಂಕಜ್ ಚಾಂದೆ (ವಿಸಿ) 2004 ಇಂಡಿಯನ್ ಫಿಲಾಸಫಿಕಲ್ ಟರ್ಮ್ಸ್. ಕೆ. ಜೆ ಸೋಮಯ್ಯ ಭಾರತೀಯ ವಿದ್ಯಾ ಪೀಠಂ ದೆಹಲಿ ( ಇಂಗ್ಲಿಷ್ ಆವೃತ್ತಿ ).

ಶಕ್ತಿ ದೇವತೆಯು ಸ್ತ್ರೀ ಎನ್ನುವುದು ಇಲ್ಲಿ ಮುಖ್ಯ. ಇದರಿಂದ ಜನರಿಗೆ ಈ ವಿಚಾರಗಳು ಬಹಳ ಬೇಗ ತಲುಪಿದ್ದು ನಿಜ. ಈ ಚಳುವಳಿಯಲ್ಲಿ ತೊಡಗಿಸಿಕೊಂಡವರು ಕವಿಗಳೂ ಹೌದು. ಆದರೆ ಕಾವ್ಯದಲ್ಲಿ ಒಂದು ತತ್ವಜ್ಞಾನವನ್ನು ಕೂಡಾ ಅಳವಡಿಸಿಕೊಂಡರು. ಹಳೆಯ ಸಾಂಪ್ರದಾಯಿಕವಾದ ನಿಲುವನ್ನು ಅವರು ಬಿಟ್ಟರು. ಒಂದು ರೀತಿಯಿಂದ ಇದನ್ನು ನಾವು ಪುನರುತ್ಥಾನದ ಕ್ರಮವೆಂದು ಹೇಳಿದರೂ ಸರಿಯಾಗುತ್ತದೆ. ಭಕ್ತಿಯು ದೇವರಿಗೆ ಅರ್ಪಣೆ ಎನ್ನುವುದನ್ನು ಹೇಳುತ್ತದೆ. ದೇವರನ್ನು ಬಿಟ್ಟು ನಾವು ಇಲ್ಲ ಎನ್ನುವುದು ಇದರ ಪ್ರಧಾನವಾದ ಆಶಯ. ಭಕ್ತಿ ಎನ್ನುವುದು ಒಂದು ಬಗೆಯ ಕಾಮವೂ ಹೌದು. ಆದರೆ ಇದನ್ನು ಇಂದ್ರಿಯ ಕಾಮ ಎಂದು ಕರೆಯುವಂತೆ ಇಲ್ಲ. ಇಂದ್ರಿಯವನ್ನು ಮೀರಿದ ದೇವರ ಕುರಿತಾದ ಕಾಮವು ಇದು ಎಂದು ಹೇಳುತ್ತಾರೆ. ಕನ್ನಡದಲ್ಲಿ ಬಂದ ಅನೇಕ ವಚನಕಾರ್ತಿಯರು ಇದನ್ನು ಪ್ರತಿಪಾದಿಸಿದರು. ಉದಾಹರಣೆಗೆ ಅಕ್ಕನ ವಚನಗಳು. ಅವಳು ಚೆನ್ನಮಲ್ಲಿಕಾರ್ಜುನ ತನ್ನ ಗಂಡ ಎಂದು ಹೇಳಿಕೊಳ್ಳುತ್ತಾಳೆ. ಶರಣ ಸತಿ, ಲಿಂಗ ಪತಿ ಎನ್ನುವುದು ವಚನಕಾರರ ಆಶಯ. ದೇವರು ಒಡೆಯ. ನಾನು ಅವನ ಕಿಂಕರ ಎನ್ನುವುದು ದಾಸರ ನಿಲುವು. ಅತ್ಯಂತ ಪ್ರಾಚೀನವಾದ ಉಪನಿಷತ್ತು ಮತ್ತು ಭಗವದ್ಗೀತೆಗಳು ಇದನ್ನು ಹೇಳಿದವು. ಕಠೋಪನಿಷತ್ತು ಮತ್ತು ಶ್ವೇತಾತರ ಉಪನಿಷತ್ತು ಇದನ್ನು ಹೇಳುತ್ತವೆ. ಯಾರು ದೇವರನ್ನು ಹೆಚ್ಚು ಪ್ರೀತಿಸುತ್ತಾರೆಯೋ ಅವರು ಅವರು ದೇವನೇ ಆಗುತ್ತಾನೆ. ದೇವರು ಗುರುವೂ ಹೌದು. ಯಾರಿಗೆ ಇದರ ತಿಳುವಳಿಕೆಯು

ಸರಿಯಾಗಿ ಅರ್ಥವಾಗುತ್ತದೆಯೋ ಅವರು ಗುರುವಿನ ಮಾತನ್ನು ಅನುಸರಿಸುತ್ತಾರೆ ಎಂದು ಅದು ಹೇಳುತ್ತದೆ. (ಕಠೋಪನಿಷತ್ತು 6. 23) ದೇವ ಎಂದರೆ ಅವನು ಬ್ರಹ್ಮನೇ ಆಗಿದ್ದಾನೆ. ಅವನನ್ನು ಸೇರಲು ಭಕ್ತಿಯು ಒಂದು ಮಾರ್ಗ ಎಂದು ವೇದಾಂತವು ಹೇಳುತ್ತದೆ. ಶರಣರು ದೇವಾಲಯವನ್ನು ನಿರಾಕರಿಸಿದರು. ಅದರ ಬದಲಿಗೆ ಅವರು ಲಿಂಗವನ್ನು ದೇವರು ಎಂದು ಕರೆದರು. ಲಿಂಗ ಎನ್ನುವುದು ಒಂದು ಬಗೆಯ ಸಂಕೇತ ಮಾತ್ರ.

ಶರಣರಲ್ಲಿ ಸತಿ ಮತ್ತು ಪತಿ ಭಾವ ಮುಖ್ಯ. ಆದರೆ ದಾಸರಲ್ಲಿ ಯಜಮಾನ ಮತ್ತು ಆಳು ಎನ್ನುವ ಪರಿಕಲ್ಪನೆಯು ಪ್ರಧಾನವಾಗುತ್ತದೆ. ಭಕ್ತಿ ಚಳುವಳಿ ಪ್ರಾರಂಭವಾದ್ದು ಹೆಚ್ಚು ಕಡಿಮೆ 8ನೆಯ ಶತಮಾನದಲ್ಲಿ. ಇದು ಮೊದಲು ಕಾಣಿಸಿದ್ದು ತಮಿಳ್ನಾಡಿನಲ್ಲಿ. ಅನಂತರ ಇದು ಕರ್ನಾಟಕಕ್ಕೆ ಬಂದಿತು. ತಮಿಳ್ನಾಡಿನಲ್ಲಿ ಶೈವರನ್ನು ನಯನಾರ್ ಎಂದು ವೈಷ್ಣವರನ್ನು ಆಳ್ವಾರ್ ಎಂದೂ ಕರೆಯುತ್ತಾರೆ. ಭಕ್ತಿಯಲ್ಲಿ ಎರಡು ವಿಧವನ್ನು ನಾರದೀಯ ಭಕ್ತಿ ಸೂತ್ರದಲ್ಲಿ ಹೇಳಲಾಗಿದೆ. ಅದರಲ್ಲಿ ಒಂದು ನಿರ್ಗುಣ ಭಕ್ತಿ. ಮತ್ತೊಂದು ಸಗುಣ ಭಕ್ತಿ. ನಿರ್ಗುಣವಾದ್ದು ಯಾವುದನ್ನೂ ಬಯಸುವುದಿಲ್ಲ. ಮತ್ತು ಅದನ್ನು ಇದೇ ರೀತಿಯದು ಎಂದು ವ್ಯಾಖ್ಯಾನಿಸುವುದಿಲ್ಲ. ಆದರೆ ಸಗುಣವಾದ್ದು ಭಕ್ತಿಯನ್ನು ನಿರ್ದಿಷ್ಟವಾಗಿ ವ್ಯಾಖ್ಯಾನಿಸುತ್ತದೆ. (ವಿವರಗಳಿಗೆ ನೋಡಿ: ಡೇವಿಡ್ ಲಾರೆಂಜೈನ್ 1996 ಪ್ರೆಯಸಸ್ ಟು ಫಾರಂ ಲೆಸ್ ಗಾಡ್: ನಿರ್ಗುಣಿ ಟೆಕ್ಸ್ ಫ್ರಂ ಸೌತ್ ಇಂಡಿಯಾ ಸ್ಟೇಟ್ ಯುನಿರ್ವಸಿಟಿ ನ್ಯೂಯಾರ್ಕ್ ಪುಟ 2) (ಇಂಗ್ಲಿಷ್ ಆವೃತ್ತಿ) ಮೇಲುಜಾತಿಯನ್ನು ವಿರೋಧಿಸಲು ಭಕ್ತಿ ಚಳುವಳಿಯು ಶುರುವಾಯಿತು ಎಂದು ಶೆಲ್ಡನ್ ಪೊಲಾಕ್ ಹೇಳುತ್ತಾರೆ. ಆದ್ದರಿಮದ ಅದರಲ್ಲಿ ಜಾತಿ ತಾರತಮ್ಯವು ಇಲ್ಲ ಎನ್ನುವುದು ಅವರ ಅಭಿಪ್ರಾಯ (ಶೆಲ್ಡನ್ ಪೊಲಾಕ್ 2009 ದ ಲ್ವಾಂಗ್ವೇಜ್ ಆಫ್ ದ ಗಾಡ್ಸ್ ಇನ್ ದ ವರ್ಲ್ಡ್ ಆಫ್ ಮೆನ್ ಯುನಿರ್ವಸಿಟಿ ಆಫ್ ಕ್ಯಾಲಿಫೋರ್ನಿಯಾ ನ್ಯೂಯಾರ್ಕ್ (ಇಂಗ್ಲಿಷ್ ಆವೃತ್ತಿ) ಪುಟ 529–534) ಲಿಂಗ ತಾರತಮ್ಯವೂ ಇಲ್ಲ. ಏಕದೇವತೋಪಾಸನೆ, ದೇವಾಲಯದ ನಿರಾಕರಣೆ, ಪಾಪ ಮತ್ತು ಪುಣ್ಯವನ್ನು ತ್ಯಜಿಸಿದ್ದು, ಅಕ್ಕಮಹಾದೇವಿ ಶಾಸ್ತ್ರಗಳನ್ನು ಬಿಟ್ಟದ್ದು ಕೂಡಾ ಅತ್ಯಂತ ಮಹತ್ವದ ಸಂಗತಿಯು ಆಗಿರುವುದು ಇಲ್ಲಿ ಉಲ್ಲೇಖನೀಯ. ಆದರೂ ವೀರಶೈವ ಮತ್ತು ಲಿಂಗಾಯತ ಎನ್ನುವುದಕ್ಕೆ ವ್ಯತ್ಯಾಸವಿದೆ. ಇದನ್ನು ನಾವು ತುಂಬಾ ವಿಶಾಲವಾದ ಅರ್ಥದಲ್ಲಿ ತೆಗೆದುಕೊಳ್ಳಬೇಕು. ವೀರಶೈವ ಸಿದ್ಧಾಂತವನ್ನು ಪಂಚಾಚಾರ್ಯರು ಪ್ರಚುರಗೊಳಿಸಿದರು ಎಂದು ಹೇಳಲಾಗುತ್ತಿದೆ. ಅವರು ಐದು ಪೀಠಗಳನ್ನು ನಶ್ರಮಾಣ ಮಾಡಿದರು. ಕಾಶಿ, ರಾಮೇಶ್ವರ, ಉಜ್ಜೈಯಿನಿ, ರಂಭಾಪುರಿ, ಶ್ರೀಶೈಲದ ಮಠಗಳನ್ನು ಕಟ್ಟಿದರು. ಅವರ ವಾದವು ಸ್ವಲ್ಪ ಮಟ್ಟಿಗೆ ಶಂಕರರ ಅದ್ವೈತವನ್ನು ಹೋಲುತ್ತದೆ. ಕೆಲವನ್ನು ಅವರು ವೇದಗಳಿಂದ ತೆಗೆದುಕೊಂಡರು.

ಅವರಿಗೆ ಸಿದ್ಧಾಂತ ಶಿಖಾಮಣಿಯು ಶಾಸ್ತ್ರಕೃತಿಯು ಆಗಿದೆ. ಅವರಿಗೆ ವೇದ, ಆಗಮಗಳು ಮತ್ತು ಸಿದ್ಧಾಂತ ಶಿಖಾಮಣಿಯು ಮುಖ್ಯವಾದರೆ ಲಿಂಗಾಯತರಿಗೆ ಅವುಗಳು ಪ್ರಮಾಣ ಗ್ರಂಥಗಳು ಆಗಲಿಲ್ಲ. ಲಿಂಗಾಯತರಂತೆ ಅವರು ಸಮಾನತೆಯನ್ನು ಒಪ್ಪಲಿಲ್ಲ. ಶಿವನ ದೇವಾಲಯವನ್ನು ವೀರಶೈವರು ಒಪ್ಪಿಕೊಂಡಿದ್ದಾರೆ. ಲಿಂಗಾಯತರು ಪರಿಪೂರ್ಣವಾದ ಸಮಾನತೆಯನ್ನು ಒಪ್ಪುತ್ತಾರೆ. ಲಿಂಗವನ್ನು ಧರಿಸುವುದು ಅಂದರೆ ರೂಪರಹಿತವಾದ, ನಿರಾಕಾರವಾದ, ಕಾಲಾತೀತವಾದ ಒಂದು ಸಂಗತಿಯನ್ನು ಒಪ್ಪುವುದು ಎಂದು ಅರ್ಥ ವಚನದಲ್ಲಿ ಸ್ತ್ರೀ ಮತ್ತು ಪುರುಷ ಎನ್ನುವ ಬೇಧವು ಇಲ್ಲ. ಶರಣ ಸತಿ ಎನ್ನುವುದು ಇದನ್ನು ಹೇಳುತ್ತದೆ. ಪ್ರತಿಯೊಬ್ಬ ಶರಣನೂ ಸ್ತ್ರೀ ಸಂವೇದನೆಯನ್ನು ಒಳಗೊಂಡು ವಚನವನ್ನು ರಚನೆ ಮಾಡಿದ್ದಾರೆ. ಸ್ತ್ರೀ ಸಂವೇದನೆಯು ಅವರಿಗೆ ದಕ್ಕಿದೆ ಎಂದು ಹೇಳಬುದು.

**ಪರಾಮರ್ಶನ ಗ್ರಂಥಗಳು:**


1. ಶ್ರಮ ಆರ್.ಎಸ್., (2007), ಪ್ರಾಚೀನ ಭಾರತ ನವಕರ್ನಾಟಕ ಪ್ರಕಾಶನ, ಬೆಂಗಳೂರು.
2. ರಾಜಾರಾಮ ಹೆಗಡೆ, (2001), ಗತಕಥನ, ರಾಘವೇಂದ್ರ ಪ್ರಕಾಶನ, ಮಲ್ಲಾಡಿಹಳ್ಳಿ.
3. ಪಂಕಜ್ ಪಾಂದೆ, (2004) ಇಂಡಿಯನ್ ಫಿಲಾಸಫಿಕಲ್ ಟರ್ಮ್ಸ್, ಕೆ.ಜೆ. ಸೋಮಯ್ಯ ಭಾರತೀಯ ವಿದ್ಯಾ ಪೀಠಂ, ದೆಹಲಿ.
4. ಡೇವಿಡ್ ಲಾರೆಂಜ್ಯೆನ್, (1996), ಪ್ರೆಯಸಸ್ ಟು ಫಾರಂ ಲೆಸ್ ಗಾಡ್: ನಿರ್ಗುಣಿ ಟೆಕ್ಸ್ ಪ್ರಂ ಸೌತ್ ಇಂಡಿಯಾ, ಸ್ಟೇಟ್ ಯುನಿರ್ವಸಿಟಿ, ನ್ಯೂಯಾರ್ಕ್.
5. ಶೆಲ್ಡನ್ ಪೊಲಾಕ್, (2009), ದ ಲ್ವಾಂಗ್ವೇಜ್ ಆಫ್ ದ ಗಾಡ್ಸ್ ಇನ್ ದ ವರ್ಲ್ಡ್ ಆಫ್ ಮೆನ್, ಯುನಿರ್ವಸಿಟಿ ಆಫ್ ಕ್ಯಾಲಿಫೋರ್ನಿಯಾ, ನ್ಯೂಯಾರ್ಕ್.
6. ಕೇಶವ ಶರ್ಮ ಕೆ., (2021), ಗ್ರಾಂಶಿಯ ಪರಿಭಾಷೆಗಳು, ರಚನಾ ಪ್ರಕಾಶನ, ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.